ಓ.ಎಸ್. 24/2017

ಪಿ.ಡಬ್ಲ್ಯೂ.-1

ಸಾಕ್ಷಿಯನ್ನು ದಿನಾಂಕ 19.03.2019 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್. ಎನ್.ಎಂ. ವಕೀಲರಿಂದಃ-

ಎಂ.ಆರ್. ನಂ. 10/84-85 ನೇದರ ದೃಢಿಕೃತ ನಕಲನ್ನು ನಿ.ಪಿ.-11 ಸ.ನಂ. 43 ರ ಸರ್ವೆ ನಕ್ಷೆಯನ್ನು ನಿ.ಪಿ.-12 ಸ.ನಂ.43 ರ ಐ.ಎಲ್.ನೇದನ್ನು ನಿ.ಪಿ.-13 ಎಂದು ಗುರುತಿಸಲಾಯಿತು. ಸ.ನಂ.-12 ರಲ್ಲಿ ದಿವಂಗತ ಗೋಪಾಲಪ್ಪನವರಿಗೆ ಮಂಜೂರಾಗಿರುವ ಸ್ವತ್ತನ್ನು ಗುರುತಿಸಿರುತ್ತಾರೆ . ನಾನು ಈ ಹಿಂದೆ ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಹೆಸರು ತಪ್ಪಾಗಿ ವಿಜಯ ಎಂದು ನಮೂದು ಇರುತ್ತದೆ . ನನ್ನ ಹೆಸರು ಮಂಜುನಾಥನಾಗಿದ್ದು ನಾನು ಈ ಪ್ರಕರಣದ 2 ನೇ ವಾದಿಯಾಗಿರುತ್ತೇನೆ . ಸದರಿ ತಪ್ಪು ಬೆರಳಚ್ಚು ತಪ್ಪಾಗಿದ್ದು ಅದನ್ನು ಹೊರತುಪಡಿಸಿ ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ .

<u>ಪಾಟೀ ಸವಾಲು:</u>- ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಕಂಪ್ಯೂಟರೀಕರಿಸಲಾಯಿತು.)

ಓ ಹೇ ಕೇ ಸ ರಿ ಇದೆ

(ಸೈಯದ್ ಅರ್ಫಾತ್ ಇಬ್ರಾಹಿಂ ಎಂ.)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.